

ರಂಗನತಿಟ್ಟು ಪಕ್ಷಿಧಾಮದಲ್ಲಿ ಬಣ್ಣದ ಕೊಕ್ಕರೆಗಳ ಕಲರವ

# ದ್ವೀಪಗಳ ಉಳಿವು ಪಕ್ಷಿಗಳ ನಲಿವು

**ಎಲೆಗಳ ಟೊಂಗೆಯನ್ನು ಕಚ್ಚಿ ತರುವ ಬಾಯ್ಕಳಕ ಕೊಕ್ಕರೆ, ಶರವೇಗದಲ್ಲಿ ಮೀನನ್ನು ಶಿಕಾರಿಯಾಡುವ ಹೆಜ್ಜಾರ್ಲೆ, ಮರಿಗಳಿಗೆ ಗುಟುಕು ತಿನಿಸುವ ಚಮಚದ ಕೊಕ್ಕರೆ, ಕೀಟಗಳನ್ನು ಬೇಟೆಯಾಡುವ ಮಿಂಚುಳ್ಳಿ, ಜಲಕ್ರೀಡೆಯಲ್ಲಿ ತೊಡಗುವ ಬಣ್ಣದ ಕೊಕ್ಕರೆ, ಬಂಡೆಗಳ ಮೇಲೆ ವಿಹರಿಸುವ ನದಿರೀವ, ಬಂಡೆಗಳಡಿ ಗೂಡು ಕಟ್ಟಿಕೊಂಡಿರುವ ಪಟ್ಟೆ ಕತ್ತಿನ ಕವಲುತೋಕೆ, 'ರಂಗನತಿಟ್ಟು ಪಕ್ಷಿಧಾಮ'ಕ್ಕೆ ಭೇಟಿ ನೀಡುವ ಪಕ್ಷಿಪ್ರಿಯರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ.**

■ **ಸಿದ್ದು ಆರ್.ಜಿ. ಹಳ್ಳಿ** ಚಿತ್ರಗಳು: ಅನೂಪ್ ರಾಘ ಟಿ.



ಕಲ್ಲು ಗೊರವನ ಕಣ್ಣೋಟ

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ 'ರಂಗನತಿಟ್ಟು ಪಕ್ಷಿಧಾಮ', 'ಕರ್ನಾಟಕದ ಪಕ್ಷಿಕಾಶಿ' ಎಂದೇ ಹೆಸರಾಗಿದೆ. ಪಕ್ಷಿಗಳಿಗೆ ಸುರಕ್ಷಿತ ಆಶ್ರಯ ಮತ್ತು ಸಂತಾನೋತ್ಪತ್ತಿಗೆ ಸೂಕ್ತ ವಾತಾವರಣ ಕಲ್ಪಿಸುವ ಜಾಗವೆಂದರೆ 'ದ್ವೀಪಗಳು'. ಇಲ್ಲಿ 26 ಸುಂದರ ದ್ವೀಪಗಳಿದ್ದು, ಅವುಗಳನ್ನು ಸಂರಕ್ಷಣೆ ಮಾಡಲು 'ಮೈಸೂರು ವನ್ಯಜೀವಿ ವಿಭಾಗ' ಮುಂದಾಗಿದೆ.

ಪಕ್ಷಿ ಮತ್ತು ಸಸ್ಯಸಂಕುಲಗಳನ್ನು ಆಧರಿಸಿ